- -                                    ಓ ಎಸ್ ನಂ.89/2018

ಪಿ.ಡಬ್ಲ್ಯೂ :1

ದಿನಾಂಕ :10-09-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು: **8** ನೇ ಪ್ರತಿವಾದಿ ಪರ ವಕೀಲರಿಂದ:

ಪ್ರಸ್ತುತ ನಾನು ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ವಾಸಿಸುತ್ತಿದ್ದೇನೆ . ಮೊದಲು ಕಲ್ಲೂರಿನಲ್ಲಿ ವಾಸಿಸುತ್ತಿದ್ದೆ . ದಾವಾ ಸ್ವತ್ತು ಮನೆಯಾಗಿರುತ್ತದೆ . ಅದು ಹೆಂಚಿನ ಮನೆಯಾಗಿದೆ . ಸದರಿ ಸ್ವತ್ತಿನ ವಿಸ್ತೀರ್ಣ ಪೂರ್ವ -ಪಶ್ಚಿಮ 107 ಅಡಿಗಳು , ಉತ್ತರ ದಕ್ಷಿಣ 33 ಅಡಿಗಳು. ದಾವಾ ಸ್ವತ್ತು ನನ್ನ ತಾತನ ಸ್ವತ್ತಾಗಿದೆ . ದಾವಾ ಸ್ವತ್ತು ನನ್ನ ತಂದೆಗೆ ವಿಭಾಗದ ಮೂಲಕ ಬಂದಿದೆ . ಆ ಸಂಬಂಧ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜುರಪಡಿಸಿಲ್ಲ .

ನನ್ನ ತಂದೆ ತಾಯಿಗೆ ನಾವು 6 ಜನ ಮಕ್ಕಳು . ನಾನು ಮತ್ತು ಚಂದ್ರಪ್ಪ , ನಾರಾಯಣಪ್ಪ , ಕೃಷ್ಣಪ್ಪ , ರಾಜಣ್ಣ ಮತ್ತು ಅಶ್ವಥ್. ದಾವಾ ಸ್ವತ್ತನ್ನು 8 ಲಕ್ಷ ರೂಗಳ ಖರೀದಿಗೆ ಮಾತುಕತೆ ಮಾಡಿದ್ದೆವು , 2 ಲಕ್ಷ ಮುಂಗಡ ಹಣ ನೀಡಿದ್ದೆವು , 6 ಲಕ್ಷ ಹಣ ನೀಡಲು ಬಾಕಿ ಇರುತ್ತದೆ . ದಾವಾ ಸ್ವತ್ತಿಗೆ ಸಂಬಂಧಿಸಿ ನನ್ನ ಅಣ್ಣಂದಿರು ಮತ್ತು ಅವರ ಕುಟುಂಬದವರು ಕರಾರು ಪತ್ರ ಬರೆದುಕೊಟ್ಟಿದ್ದಾರೆ . 1 ರಿಂದ 7 ನೇ ಪ್ರತಿವಾದಿಗಳು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ . 1 ರಿಂದ 7 ನೇ ಪ್ರತಿವಾದಿಗಳು ನನ್ನ ಸಹೋದರರು ಮತ್ತು ಅವರ ಕುಟುಂಬದವರು ಆಗಿರುವ ಕಾರಣ ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆ ಎಂಬ ಕಾರಣಕ್ಕೆ ಕರಾರು ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನೋಂದಾಯಿತವಲ್ಲದ ಕರಾರು ಪತ್ರವಾಗಿದೆ . ನನ್ನ ಅಣ್ಣ ನಾರಾಯಣಪ್ಪ ರವರ ಮನೆಯಲ್ಲಿ ಕ್ರಯದ ಮಾತುಕತೆ ಮಾಡಿದ್ದೇನೆ . ಕ್ರಯದ ಕರಾರಿಗೆ ಛಾಪಾ ಕಾಗದವನ್ನು ಮಾಗಡಿಯಲ್ಲಿ ತೆಗೆದುಕೊಂಡಿದ್ದೇನೆ . ಛಾಪಾ ಕಾಗದವನ್ನು ನಾನೇ ಖರೀದಿಸಿದ್ದೆ . 100 ರೂ ಮುಖಬೆಲೆಯ ಛಾಪಾ ಕಾಗದವನ್ನು ಖರೀದಿಸಿದ್ದೇನೆ . ಮಾಗಡಿಯಲ್ಲಿರುವ ವಕೀಲರ ಕಚೇರಿಯಲ್ಲಿ ಕರಾರು ಪತ್ರ ಬೆರಳಚ್ಚು ಮಾಡಲಾಗಿದೆ . ನಮ್ಮ ಸ್ವತ್ತನ್ನು ನಮ್ಮ ಕುಟುಂಬದವರಿಗೆ ನೀಡಲೀ ಎಂಬ ಕಾರಣಕ್ಕೆ ಕರಾರು ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರ ನೋಂದಣಿಯ ಸಮಯ 6 ಲಕ್ಷ ಬಾಕಿ ಮೊತ್ತವನ್ನು ನೀಡುತ್ತೇನೆ ಎಂದು ತಿಳಿಸಿದ್ದೆ .ನಾನು ಹೇಳುವಂತೆ 2 ಲಕ್ಷ ಹಣ ನೀಡಿ ನನ್ನ ಸಹೋದರರು ಮತ್ತು ಅವರ ಕುಟುಂಬದವರಿಂದ ಯಾವುದೇ ಕ್ರಯದ ಕರಾರು ಪತ್ರ

ಬರೆಸಿಕೊಂಡಿಲ್ಲ , ಕರಾರು ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 01-08-2018 ರಂದು 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರು 8 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಸಂಬಂಧ ನೋಂದಾಯಿತ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ . ಸದರಿ ಕ್ರಯದ ಮಾತುಕತೆಯಲ್ಲಿ ನಾನು ಸಹಾ ಇದ್ದೆ , ದಾವಾ ಸ್ವತ್ತು ಹಳೆಯ ಮನೆ ಇದ್ದು ಕಟ್ಟಡ ಬಿದ್ದು ಹೋಗಿದ್ದರಿಂದ ಮತ್ತು ಪ್ರತಿವಾದಿಗಳು ಬೆಂಗಳೂರಿನಲ್ಲಿ ವಾಸಿಸುತ್ತಿರುವ ಕಾರಣ ಅದನ್ನು ಮಾರಾಟ ಮಾಡುವ ಸಲುವಾಗಿ 8 ನೇ ಪ್ರತಿವಾದಿಗೆ 2,85,000/- ರೂಗಳಿಗೆ ಮಾತುಕತೆ ನಡೆಸಿ 1,85,000/- ರೂಗಳನ್ನು ಮುಂಗಡ ಪಡೆಯಲಾಗಿದೆ ಎಂದರೆ ಸರಿಯಲ್ಲ. ಕರಾರು ಪತ್ರ ನೋಂದಣಿಯ ದಿನಾಂಕದಂದು 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರು ಪತ್ರಕ್ಕೆ ಸಹಿ ಮಾಡಿದ್ದು ನಾನು ಮಾತ್ರ ಹಣ ಪಡೆದಿದ್ದರೂ ಸಹಿ ಮಾಡದೇ ಬಂದಿದ್ದೇನೆ , ಕ್ರಯ ಪತ್ರ ನೋಂದಣಿ ದಿನ ನನ್ನ ಸಹಿ ಮಾಡಿಸುವುದಾಗಿ ಅವರೆಲ್ಲರೂ 8 ನೇ ಪ್ರತಿವಾದಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ . ಸದರಿ ಕರಾರು ಪತ್ರ ನೋಂದಣಿಯಾದ ಒಂದು ವಾರದ ನಂತರ ಪತ್ರ ನೋಂದಾಯಿಸಿರುವ ವಿಚಾರ ನನಗೆ ತಿಳಿಯಿತು . ದಾವಾ ಸ್ವತ್ತಿಗೆ ಸಂಬಂಧಿಸಿ ನಿಪಿ -1 ರಂತೆ ನನಗೆ ಕರಾರು ಪತ್ರ ಬರೆದುಕೊಟ್ಟಿದ್ದರು ಸಹಾ 8 ನೇ ಪ್ರತಿವಾದಿಗೆ ಏಕೆ ನೋಂದಾಯಿತ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದೀರಿ ಎಂದು 1 ರಿಂದ 7 ನೇ ಪ್ರತಿವಾದಿಗಳಿಗೆ ಕೇಳಿಲ್ಲ , ಕಾರಣ ಅವರು ಯಾರು ಲಭ್ಯವಾಗಲಿಲ್ಲ . ದಿಃ 21-08-2018 ರಂದು 8 ನೇ ಪ್ರತಿವಾದಿಗೆ ನೋಟಿಸ್ ನೀಡಿರುವಂತೆ 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರಿಗೆ ನೋಟಿಸ್ ನೀಡಿದ್ದೀರಿ ಎಂದರೆ ಅವರಿಗೂ ಸಹಾ ನೀಡಿದ್ದೆ ಎಂದು ಸಾಕ್ಷಿ ಹೇಳಿದ್ದಾರೆ . ಆ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ನಿಪಿ -1 ದಾಖಲೆಯನ್ನು 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರು ಬರೆದುಕೊಟ್ಟಿದ್ದಾರೆ ಎಂದು ಸುಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರು ನನಗೆ ನಿಪಿ -1 ರಂತೆ ಯಾವುದೇ ಕರಾರು ಪತ್ರ ಬರೆದುಕೊಡದೇ ಇದ್ದರೂ ಸಹಾ ದಿಃ 01-08-2018 ರಂದು 8 ನೇ ಪ್ರತಿವಾದಿಗೆ ನೋಂದಾಯಿತ ದಾಖಲೆ ಮಾಡಿಕೊಟ್ಟಿರುವುದರಿಂದ ಅದಕ್ಕೆ ಮೊದಲೇ ನನಗೆ ನಿಪಿ -1 ನ್ನು ಬರೆದುಕೊಟ್ಟಿದ್ದಾರೆ ಎಂದು ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಕರಾರು

ಪತ್ರ ಏಕೆ ಮಾಡಿಕೊಟ್ಟಿದ್ದೀರಿ ಎಂದು ನಮ್ಮ ಸ್ವತ್ತು ನಾವೇ ಉಳಿಸಿಕೊಳ್ಳೋಣಾ ಎಂದು 1 ರಿಂದ 7 ನೇ ಪ್ರತಿವಾದಿಗಳೊಡನೆ ಪಂಚಾಯಿತಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಅವರು ಯಾರು ಸಹಾ ಬರಲಿಲ್ಲಎಂದು ತಿಳಿಸಿದ್ದಾರೆ .

ದಾವಾ ಸ್ವತ್ತಿಗೆ ನಾನು ಮತ್ತು 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರೆಲ್ಲರೂ ಸಹಾ ಹಕ್ಕುದಾರರು ಎಂದರೆ ಸರಿ . ದಾವಾ ಸ್ವತ್ತನ್ನು ವಿಭಾಗಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾವಾ ಸ್ವತ್ತನ್ನು ನಿನಗೆ ನೀಡುತ್ತೇವೆ ಎಂದು ತಿಳಿಸಿ ಅವರು ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದು ತಿಳಿಸಿದ್ದಾರೆ . 1,2,4,6,7 ನೇ ಪ್ರತಿವಾದಿಗಳು ಹಾಗೂ 3 ಮತ್ತು 5 ನೇ ಪ್ರತಿವಾದಿಗಳ ವಾರಸುದಾರರಿಗೆ ತೊಂದರೆ ನೀಡಬೇಕೆಂದು ನಿಪಿ -1 ನ್ನು ಸೃಷ್ಟಿಸಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .